**ಸುಬ್ಬಿ:** (ಮೇಕಪ್ ಮಾಡಿಕೊಳ್ಳುತ್ತ) ರೀ, ಈಗ ನನ್ನ ಹುಬ್ಬುಗಳು ಹೇಗೆ ಕಾಣ್ತ ಇವೆ?
**ಗುಂಡ:** ಪಕ್ಕದ ಮಾರ್ಗೋಸಾ ರೋಡ್ ತರಹ ಸೂಪರ್ ಕಣೆ!
**ಸುಬ್ಬಿ:** ನನ್ನ ಕೆನ್ನೆ?
**ಗುಂಡ:** ನಮ್ಮ ಮನೆಯ ಮೂರನೇ ಕ್ರಾಸ್‌ನಲ್ಲಿರುವ 'ಬೆಣ್ಣೆ ಗುಲ್ಕನ್ ಅಂಗಡಿ'ಲಿ ಸಿಗುವ ಅಪ್ಪಟ ಬೆಣ್ಣೆ ಥರಾನೇ ಇದೆ!
**ಸುಬ್ಬಿ:** ನನ್ನ ಮೂಗು?
**ಗುಂಡ:** ಥೇಟ್ ಸಂಪಿಗೆ ರೋಡ್!
**ಸುಬ್ಬಿ:** (ಉಬ್ಬಿ ಹೋದಳು) ಎಷ್ಟು ರಸಿಕರು ಕಣ್ರೆ ನೀವು! ಅಂದ ಹಾಗೆ ನನ್ನ ಮುಖ ಈಗ ಹೇಗಿದೆ ಅಂತ ಎರಡೇ ಪದಗಳಲ್ಲಿ ಹೇಳ್ಬಿಡ್ರಿ!
**ಗುಂಡ:** ಲೇ ಸುಬ್ಬಿ, ಇಷ್ಟು ಹೇಳಿದ್ರೂ ತೃಪ್ತಿ ಆಗಲಿಲ್ಲವಾ? ಸರಿ, ಟೋಟಲ್ ಆಗಿ ಹೇಳಬೇಕು ಅಂದ್ರೆ ನಿನ್ನ ಮುಖ ಥೇಟ್ ನಮ್ಮ ಮಲ್ಲೇಶ್ವರಂನಲ್ಲಿರುವ ಎಂಟನೇ ಮೈನ್ ರೋಡ್ ಏಳನೇ ಕ್ರಾಸ್ ಇದ್ದಂತೆ!

ರೂಪಾಂತರಿ ವೈರಸ್ ಒಮಿಕ್ರಾನ್ ಆತಂಕ



ಎರಡೂ ಲಸಿಕೆಯಾಗಿದ್ರೂ, ಮಾಸ್ಕ್ ಮತ್ತು ಸೋಷಿಯಲ್ ಡಿಸ್ಟೆನ್ಸ್ ನೆನಪು ಮಾಡೋಕೆ ಹೊಸ ಹೊಸ ವೈರಸ್‌ಗಳು ಬರೋದೇನೋ!

**ಟ್ರಾಫಿಕ್ ಪೊಲೀಸ್:** ಅಡ್ಡದಿಡ್ಡಿ ಕಾರು ಓಡಿಸಿದ್ದಕ್ಕೆ ಕೇಸ್ ಹಾಕ್ತೀನಿ.
**ಗುಂಡ:** ಬೇಡ ಸರ್. ನಾನು ಈಗತಾನೇ ಕಾರು ಓಡಿಸೋದು ಕಲೀತಾ ಇದೀನಿ.
**ಪೊಲೀಸ್:** ಬೊಗಳೆ ಬಿಡಬೇಡ! ಡ್ರೈವಿಂಗ್ ಸ್ಕೂಲ್‌ನ ಸಿಬ್ಬಂದಿ ಇಲ್ಲದೆ ನೀನೊಬ್ಬನೇ ಕಾರು ಹೇಗೆ ಓಡಿಸುತ್ತೀಯ?
**ಗುಂಡ:** ಏನು ಮಾಡಲಿ ಸರ್? ಈ ಕೊರೊನಾ ಎಫೆಕ್ಟ್‌ನಿಂದ ಎಲ್ಲ ಆನ್‌ಲೈನ್ ಆಗಿದೆ. ಡ್ರೈವಿಂಗ್ ಸಹ ಆನ್‌ಲೈನ್‌ನಲ್ಲೇ ಹೇಳಿಕೊಡ್ತಾರೆ!

***

**ಗುಂಡ:** (ಹೋಟೆಲಿನಲ್ಲಿ) ತಿಂಡಿ ಏನಯ್ಯಾ ಇದೆ?
**ಮಾಣಿ:** ಇಡ್ಲಿ, ವಡೆ, ರೈಸ್ ಬಾತ್, ಚೌ ಚೌ ಬಾತ್, ದೋಸೆ, ಚಪಾತಿ ಇದೆ ಸರ್.
**ಗುಂಡ:** ಓಹ್ ಗುಡ್! ಬಿಸಿಬಿಸಿ ಚಪಾತಿ ಸಿಗುತ್ತಾ?
**ಮಾಣಿ:** ಲಾಕ್‌ಡೌನ್ ಟೈಮ್‌ನಲ್ಲಿ ಹೋಟೆಲ್ ಯಾವಾಗ ಓಪನ್ ಮಾಡಿ ಅಂತಾರೋ, ಯಾವಾಗ ಕ್ಲೋಸ್ ಮಾಡಿ ಅಂತಾರೋ ಗೊತ್ತಿಲ್ಲ. ಅದಕ್ಕೆ ಚಪಾತಿ, ವಡೆಯನ್ನೆಲ್ಲ ಒಂದೆರಡು ದಿನ ಮುಂಚೆಯೇ ಮಾಡಿ ಇಟ್ಟಿರ್ತೀವಿ. ನೀವು ಬೇಕು ಅಂದರೆ ಅದನ್ನೇ ಬಿಸಿ ಮಾಡಿ ತಂದು ಕೊಡ್ತೀನಿ!

***



ಟಿವಿಯಲ್ಲಿ 2021 ರ ಹಿನ್ನೋಟ ನೋಡ್ತಾ ನೋಡ್ತಾ ಹೇಗೆ ಮಾಡಿ ಕೊಂಡಿದ್ದಾರೆ ನೋಡಿ! ಶಾಕ್ಟರ್...!

**ಡಾಕ್ಟರ್:** ಮತ್ತೆ ಯಾಕಪ್ಪ ಬಂದೆ?
**ಗುಂಡ:** ನನಗೆ ನೆನಪಿನ ಶಕ್ತಿ ಕಡಿಮೆ ಆಗಿದೆ ಡಾಕ್ಟ್ರೆ!
**ಡಾಕ್ಟರ್:** ಅದಕ್ಕೆ ಆವತ್ತೇ ನಿನಗೆ ಮಾತ್ರೆಗಳನ್ನು ಕೊಟ್ಟಿದ್ದೆ ಅಲ್ವಾ?
**ಗುಂಡ:** ಹಾ, ಈಗ ಜ್ಞಾಪಕ ಬಂತು ಡಾಕ್ಟ್ರೆ.
**ಡಾಕ್ಟರ್:** ಸರಿ. ಮತ್ತೇನಾದ್ರೂ ತೊಂದರೆ ಇದ್ಯಾ?
**ಗುಂಡ:** ಮಾತ್ರೆ ನುಂಗೋದೇ ಮರೆತು ಬಿಡುತ್ತಲ್ಲ!

***

**ಪೊಲೀಸ್:** ಹೇ ಗುಂಡ, ನಡುರಾತ್ರಿಯಲ್ಲಿ ಎಲ್ಲಿಗೆ ಹೋಗ್ತಾ ಇದ್ದೀಯಾ?
**ಗುಂಡ:** (ಕುಡಿದು ಟೈಟ್ ಆಗಿದ್ದ) ಕುಡಿತದ ಬಗ್ಗೆ ಭಾಷಣ ಕೇಳೋಕೆ ಸರ್!
**ಪೊಲೀಸ್:** ಎಲಾ ನಿನ್ನ. ಇಷ್ಟು ಹೊತ್ನಲ್ಲಿ ಯಾರೋ ನಿಂಗೆ ಭಾಷಣ ಮಾಡೋರು?
**ಗುಂಡ:** ನನ್ ಹೆಂಡ್ತಿ ಸುಬ್ಬಿ ಸರ್! ಅದು ನಮ್ಮ ಮನೆ ಬಾಗಿಲಿನಲ್ಲಿ!

***

**ಸುಬ್ಬಿ:** ರೀ, ಇವತ್ತು ಬೆಳಿಗ್ಗೆ ಎದುರು ಮನೆಯ ಶ್ಯಾಮ ರಾಯರು ಬಂದಿದ್ರು.
**ಗುಂಡ:** ಏನಂತೆ?
**ಸುಬ್ಬಿ:** ಅವ್ರ ಮೂರನೆಯ ಹೆಂಡತಿಯ ಶ್ರಾದ್ಧದ ಊಟಕ್ಕೆ ಕರೆಯೋಕೆ. ಖಂಡಿತ ಬರಬೇಕಂತೆ!
**ಗುಂಡ:** ಇಲ್ಲ ಕಣೇ, ನಾನು ಹೋಗೊಲ್ಲ.
**ಸುಬ್ಬಿ:** ಪಾಪ ಅಷ್ಟೊಂದು ಬಲವಂತ ಮಾಡಿ ಕರೆದವ್ರೆ. ಹೋಗಿ ಬರೋಣ ಬನ್ನಿ!
**ಗುಂಡ:** ಈಗಾಗಲೇ ಅವ್ರು ನನ್ನ ಮೂರು ಬಾರಿ ಕರೆದವ್ರೆ. ಆದ್ರೆ ನಾನು ಒಂದು ಬಾರಿಯೂ ಅವ್ರನ್ನ ಶ್ರಾದ್ಧದ ಊಟಕ್ಕೆ ಕರೆದಿಲ್ಲ! ಅದಕ್ಕೆ ಹೋಗೋದು ಬೇಡ ಅಂದೆ!

***

**ಮಂಡ:** ಇವನು ನಿನ್ನ ಏನಂತ ಬೈದ?
**ಗುಂಡ:** ಅಶ್ಲೀಲ ಪದಗಳಿಂದ ಬೈದ. ಅದನ್ನು ಮರ್ಯಾದೆ ಇರೋರ ಮುಂದೆ ಹೇಳೋಕೆ ಆಗಲ್ಲ!
**ಮಂಡ:** ಹಾಗಾದ್ರೆ ಅದನ್ನ ನನ್ನ ಕಿವಿಯಲ್ಲಿ ಹೇಳು!

***

**ತಿಮ್ಮ:** ಯಾಕೋ ಗುಂಡ, ನಿನ್ನ ಕೆನರಾ ಬ್ಯಾಂಕ್ ಅಕೌಂಟ್ ಕ್ಲೋಸ್ ಮಾಡಿದ್ದೀಯ?
**ಗುಂಡ:** ನಿನ್ನೆ ರಾತ್ರಿ ನನ್ನ ಕೊಲೆ ಮಾಡಿದಂತೆ ಕನಸು ಬಿತ್ತು!
**ತಿಮ್ಮ:** ಕನಸಿಗೂ ಬ್ಯಾಂಕ್ ಅಕೌಂಟ್ ಕ್ಲೋಸ್ ಮಾಡೋಕೆ ಏನು ಸಂಬಂಧ?
**ಗುಂಡ:** ನಿಂಗ್ ಗೊತ್ತಾ? 'ಯುವರ್ ಡ್ರೀಮ್ಸ್ ಕಮ್ ಟ್ರೂ' ಅನ್ನೋದು ಈ ಬ್ಯಾಂಕ್‌ನವರ ಸ್ಲೋಗನ್. ಅದಕ್ಕೆ ಕ್ಲೋಸ್ ಮಾಡಿದೆ. ಇನ್ಮೇಲೆ ಆ ಬ್ಯಾಂಕ್‌ನವರ ಸಹವಾಸವೇ ಮಾಡಲ್ಲ!

***

**ಸುಬ್ಬ:** ಗುಂಡ, ಸಂಗೀತ ಕೇಳೋಕೆ ಬಂದ್ಯಾ?
**ಗುಂಡ:** ಹೌದು ಕಣಯ್ಯಾ!
**ಸುಬ್ಬ:** ನಾನೂ ಅದಕ್ಕೆಂದೇ ಇಲ್ಲಿಗೆ ಬಂದೆ. ಆದ್ರೆ ಆಕೆ ಯಾಕೆ ಅಷ್ಟೊಂದು ಕೆಟ್ಟದಾಗಿ ಹಾಡ್ತಾ ಇದಾಳೆ? ಅಷ್ಟಕ್ಕೂ ಆಕೆ ಯಾರು?
**ಗುಂಡ:** ಹೇ ಸುಬ್ಬ. ಅದು ನನ್ನ ಹೆಂಡತಿ!
**ಸುಬ್ಬ:** ಹೌದಾ? ಆಕೆ ಹಾಡ್ತಾ ಇರೋದು ಪರವಾಗಿಲ್ಲ! ಆದ್ರೆ ಸಾಹಿತ್ಯ ಮಾತ್ರ ತುಂಬಾ ಕೆಟ್ಟದಾಗಿದೆ! ಅದನ್ನು ಬರೆದ ಬಕ್ರ ನನ್ ಮಗ ಯಾರು?
**ಗುಂಡ:** ಏಯ್, ನಾನೇ ಕಣೋ!

***

(ಹುಚ್ಚಾಸ್ಪತ್ರೆಗೆ ವಿಸಿಟ್ ಮಾಡಲು ಮಂತ್ರಿ ಬಂದ್ರು. ಎಲ್ಲ ಹುಚ್ಚರೂ ಅವರಿಗೆ ನಮಸ್ಕರಿಸಿದರು! ಆದ್ರೆ, ನಮ್ ಗುಂಡ ಮಾತ್ರ ನಮಸ್ಕಾರ ಮಾಡಲಿಲ್ಲ)
**ಮಂತ್ರಿ:** ಅಲ್ಲಿ ಕೂತವನು ನನಗೆ ಯಾಕೆ ನಮಸ್ಕರಿಸಲಿಲ್ಲ?
**ಡಾಕ್ಟರ್:** ಅವನಿಗೆ ಮೊನ್ನೆ ತಾನೇ ಹುಚ್ಚು ಬಿಟ್ಟಿದೆ ಸರ್. ಡಿಸ್ಚಾರ್ಜ್‌ಗಾಗಿ ಕಾಯುತ್ತಿದ್ದಾನೆ.

ಸಂಗ್ರಹ: ಆರ್. ವೀರೇಶ್ ಕುಮಾರ್,
ಬೆಂಗಳೂರು